

ಎಸ್.ವಿ. ಹೂಗಾರ

# ಗರ್ಜನೆ

ಮಂತ್ರಿಯ ಮೊಮ್ಮಗನಿಗೆ ಎಲ್ಲಿಲ್ಲದ ಉತ್ಸಾಹ. ಮೃಗಾಲಯ ನೋಡಿಕೊಂಡು ಬರಲು ಅಜ್ಜ ಒಪ್ಪಿದ್ದರು. ಸುಲಭದಲ್ಲಿ ಇಂತಹದ್ದಕ್ಕೆಲ್ಲ ಒಪ್ಪುವ ಆಸಾಮಿಯಲ್ಲ ಅಜ್ಜ. ಈ ಬಾರಿ, 'ಸರಿ, ಬರುವ ಮಂಗಳವಾರ ಹೋಗು' ಅಂದಿದ್ದರು.

ಇತ್ತೀಚೆಗೆ ಅವರು ಕೊಟ್ಟ ಹೇಳಿಕೆಗಳಲ್ಲಿ ಒಂದೆರಡು ಯಾವುದೋ ವರ್ಗದ ಜನರಿಗೆ ಹಿಡಿಸದೆ ಅವರಿಗೆ ಬೆದರಿಕೆ ಕರೆಗಳು ಬಂದ ಹಿನ್ನೆಲೆಯಲ್ಲಿ ಮಂತ್ರಿಯವರಿಗೆ, ಮತ್ತವರ ಕುಟುಂಬಕ್ಕೆ ಹೆಚ್ಚುವರಿ ಭದ್ರತೆ ಒದಗಿಸಲಾಗಿತ್ತು. ಈಗ ಇಡೀ ಸರಕಾರದಲ್ಲಿ ಅತ್ಯಂತ ಹೆಚ್ಚು ಸೆಕ್ಯೂರಿಟಿಯಿರುವ ಮಂತ್ರಿ ತಾನು ಎಂದು ಆತ ಅದರಿಂದ ಮತ್ತಷ್ಟು ಖುಷಿಗೊಂಡಿದ್ದರು! ಮನುಷ್ಯನಿಗೆ ಹಣವಿರುವ ಸಮಾಧಾನ ಬೇಕು, ಅಹಂಕಾರವಲ್ಲ ಅಂತ ಜನ ಹೇಳೋದು ಅಜ್ಜನಂತಹ ಮಂತ್ರಿಯವರನ್ನು ಕಂಡೇ ಇರಬೇಕು. ಬಂಗಲೆ, ಕಾರು, ಆಳುಕಾಳು, ಸೆಕ್ಯುರಿಟಿಗಳು, ಅಧಿಕಾರ, ಕೈತುಂಬ ಹಣ  ಮಂತ್ರಿಗಳು ತನ್ನ ಮಂತ್ರಿತನದ ಸುಖವನ್ನು ಯಥೇಚ್ಛವಾಗಿ ಅನುಭವಿಸುತ್ತಿದ್ದರು. ಅಂತಹ ಮಂತ್ರಿಗಳ ಮೊಮ್ಮಗ ಅಂದರೆ ಯಾವ ರಾಜಕುಮಾರನಿಗೆ ಕಡಿಮೆ?

ಮೃಗಾಲಯ ನೋಡಬೇಕು ಎಂದು ಮೊಮ್ಮಗ ಹೇಳಿದ ಮೇಲೆ ಸಂಬಂಧ ಪಟ್ಟವರಿಗೆಲ್ಲ